# ಕರ್ನಾಟಕ ವಿಧಾನ ಪರಿಷತ್ತು

## <u>ಲಘು ಪ್ರಕಟಣೆ ಭಾಗ - 2</u>

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

ಸೋಮವಾರ, ದಿನಾಂಕ: 07ನೇ ಜನವರಿ, 2013

**ಸಂಖ್ಯೆ: 01**

2013ನೇ ಸಾಲಿನ ಕ್ಯಾಲೆಂಡರ್ ಹಾಗೂ ಶಾಸಕರ ದಿನಚರಿ ಪುಸ್ತಕಗಳನ್ನು ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳಿಗೆ (ತಲಾ ಎರಡರಂತೆ) ವಿಧಾನ ಪರಿಷತ್ತಿನ ಸಚಿವಾಲಯದ ಸೂಚನಾ ಪತ್ರ ಶಾಖೆಯಲ್ಲಿ ವಿತರಿಸಲಾಗುತ್ತಿದೆ.

ಆದುದರಿಂದ, 2013ನೇ ಸಾಲಿನ ಶಾಸಕರ ದಿನಚರಿ ಪುಸ್ತಕ ಹಾಗೂ ಕ್ಯಾಲೆಂಡರ್‌ಗಳನ್ನು ವಿಧಾನ ಸೌಧದ ಮೊದಲನೆಯ ಮಹಡಿಯಲ್ಲಿರುವ ಕೊಠಡಿ ಸಂಖ್ಯೆ: 104ರ ಸೂಚನಾ ಪತ್ರ ಶಾಖೆಯಲ್ಲಿ ಖುದ್ದಾಗಿ ಅಥವಾ ಪತ್ರದ ಮುಖೇನ ಪಡೆಯಬಹುದೆಂದು ಮಾನ್ಯ ಸದಸ್ಯರುಗಳಿಗೆ ಈ ಮೂಲಕ ತಿಳಿಯಪಡಿಸಲಾಗಿದೆ.

**ವಿ.ಶ್ರೀಶ್**
**ಕಾರ್ಯದರ್ಶಿ**

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳಿಗೆ**

# ಕರ್ನಾಟಕ ವಿಧಾನ ಪರಿಷತ್ತು

ಲಘು ಪ್ರಕಟಣೆ ಭಾಗ – 2

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಶುಕ್ರವಾರ, ದಿನಾಂಕ: 18ನೇ ಜನವರಿ, 2013**

**ಸಂಖ್ಯೆ: 02**

**<u>ವಿಧಾನ ಪರಿಷತ್ತಿನ ಅಧಿವೇಶನ ಮುಕ್ತಾಯಗೊಂಡಿರುವ ಬಗ್ಗೆ</u>**

ದಿನಾಂಕ 13ನೇ ಡಿಸೆಂಬರ್, 2012ರ ಗುರುವಾರದಂದು ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾದ ವಿಧಾನ ಪರಿಷತ್ತಿನ ನೂರ ಇಪ್ಪತ್ತನೆಯ ಅಧಿವೇಶನವನ್ನು 15ನೇ ಜನವರಿ, 2013ರ ಅಧಿಸೂಚನೆಯ ಸಂಖ್ಯೆ DPAL/06/SAMVYAVI 2012ರ ಮೂಲಕ ಘನತೆವೆತ್ತ ರಾಜ್ಯಪಾಲರು ಮುಕ್ತಾಯಗೊಳಿಸಿರುತ್ತಾರೆ.

**ವಿ. ಶ್ರೀಶ್**
**ಕಾರ್ಯದರ್ಶಿ**

ಗೆ:

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳಿಗೆ

**<u>ಪ್ರತಿಗಳು:</u>**

01. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ಬೆಂಗಳೂರು.
02. ಭಾರತ ಸರ್ಕಾರದ ನ್ಯಾಯಾಂಗ ಇಲಾಖೆಯ ಕಾರ್ಯದರ್ಶಿಯವರಿಗೆ.
03. ಭಾರತ ಸರ್ಕಾರದ ಸಾಂಸದಿಕ ವ್ಯವಹಾರಗಳ ಇಲಾಖೆಯ ಕಾರ್ಯದರ್ಶಿಯವರಿಗೆ, ನವದೆಹಲಿ.
04. ಭಾರತ ಸರ್ಕಾರದ ಗೃಹ ಇಲಾಖೆಯ ಕಾರ್ಯದರ್ಶಿಯವರಿಗೆ, ನವದೆಹಲಿ.
05. ಪ್ರಧಾನ ಕಾರ್ಯದರ್ಶಿ, ಲೋಕಸಭೆ, ನವದೆಹಲಿ.
06. ಪ್ರಧಾನ ಕಾರ್ಯದರ್ಶಿ, ರಾಜ್ಯಸಭೆ, ನವದೆಹಲಿ.
07. ಕಾರ್ಯದರ್ಶಿ, ಭಾರತ ಚುನಾವಣಾ ಆಯೋಗ, ನವದೆಹಲಿ.
08. ರಾಜ್ಯಪಾಲರ ಕಾರ್ಯದರ್ಶಿ, ರಾಜಭವನ, ಕರ್ನಾಟಕ, ಬೆಂಗಳೂರು.
09. ಸ್ಥಾನೀಯ ಆಯುಕ್ತರು, ಕರ್ನಾಟಕ ಭವನ, ನವದೆಹಲಿ.
10. ಭಾರತ ಸರ್ಕಾರದ ಎಲ್ಲಾ ಇಲಾಖಾ ಕಾರ್ಯದರ್ಶಿಯವರಿಗೆ, ನವದೆಹಲಿ.
11. ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ, ಬೆಂಗಳೂರು.
12. ಅಡ್ವೊಕೇಟ್ ಜನರಲ್, ಉಚ್ಛ ನ್ಯಾಯಾಲಯ ಕಟ್ಟಡ, ಬೆಂಗಳೂರು.
13. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
14. ಕರ್ನಾಟಕ ಸರ್ಕಾರದ ಎಲ್ಲಾ ಇಲಾಖಾ ಕಾರ್ಯದರ್ಶಿಗಳಿಗೆ.
15. ಎಲ್ಲಾ ರಾಜ್ಯ ವಿಧಾನಮಂಡಲಗಳ ಕಾರ್ಯದರ್ಶಿಗಳಿಗೆ.
16. ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ಬೆಂಗಳೂರು.
17. ನಿರ್ದೇಶಕರು, ಆಕಾಶವಾಣಿ, ರಾಜಭವನ ರಸ್ತೆ, ಬೆಂಗಳೂರು.
18. ನಿರ್ದೇಶಕರು, ದೂರದರ್ಶನ ಕೇಂದ್ರ, ಜೆ.ಸಿ. ನಗರ, ಬೆಂಗಳೂರು.
19. ನಿರ್ದೇಶಕರು, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ಇಲಾಖೆ, ಬೆಂಗಳೂರು.
20. ಮಾನ್ಯ ಸಭಾಪತಿಯವರ ಆಪ್ತ ಕಾರ್ಯದರ್ಶಿಯವರಿಗೆ, ಕ.ವಿ.ಪ.
21. ಮಾನ್ಯ ಉಪ ಸಭಾಪತಿಯವರ ಆಪ್ತ ಕಾರ್ಯದರ್ಶಿಯವರಿಗೆ, ಕ.ವಿ.ಪ.
22. ಮಾನ್ಯ ವಿರೋಧ ಪಕ್ಷದ ನಾಯಕರ ಆಪ್ತ ಕಾರ್ಯದರ್ಶಿಯವರಿಗೆ, ಕ.ವಿ.ಪ.
23. ಮಾನ್ಯ ಸರ್ಕಾರಿ ಮುಖ್ಯ ಸಚೇತಕರ ಆಪ್ತ ಕಾರ್ಯದರ್ಶಿಯವರಿಗೆ, ಕ.ವಿ.ಪ.
24. ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರ ಆಪ್ತ ಕಾರ್ಯದರ್ಶಿಯವರಿಗೆ, ಕ.ವಿ.ಪ.
25. ಕರ್ನಾಟಕ ವಿಧಾನ ಪರಿಷತ್ತಿನ ಎಲ್ಲಾ ಅಧಿಕಾರಿಗಳಿಗೆ ಹಾಗೂ ಶಾಖೆಗಳ ಮಾಹಿತಿಗಾಗಿ.

# KARNATAKA LEGISLATIVE COUNCIL

BULLETIN PART-II

(General information relating to Parliamentary and other matters)

Friday, the 18th January, 2013

**No. 02**

## PROROGATION OF THE SESSION OF LEGISLATIVE COUNCIL

The Hundred and Twentieth Session of the Karnataka Legislative Council which was adjourned sine-die on Thursday, the 13th December, 2012 has been prorogued by His Excellency the Governor vide Notification No. DPAL 06 SAMVYAVI 2012, dated: 15th January, 2013.

**V. SHREESH**
Secretary

**To:**

**The Hon'ble Members of Legislative Council**

**Copy to:**

01.The Chief Secretary to Government of Karnataka, Bangalore.
02. The Secretary to the Government of India, Ministry of law, New Delhi.
03. The Secretary to the Government of India, Department of parliamentary Affairs, New Delhi.
04. The Secretary to the Government of India, Ministry of Home Affairs, New Delhi.
05. The Secretary General, Lok Sabha, New Delhi.
06. The Secretary General, Rajya Sabha, New Delhi.
07. The Secretary, Election Commission of India, New Delhi.
08. The Secretary to Governor, Rajbhavan, Bangalore.
09. The Resident Commissioner, Karnataka Bhavan, New Delhi.
10. All the Secretaries to Government of India, New Delhi.
11. The Secretary, Karnataka Legislative Assembly, Bangalore.
12. The Advocate General, High Court Building, Bangalore.
13. The Accountant General of Karnataka, Bangalore.
14. All the Secretaries to the Government of Karnataka.
15. The Secretaries of all State Legislatures.
16. The Director of Information and Publicity, Bangalore
17. The Director, All India Radio, Rajbhavan Road, Bangalore.
18. The Director, Doordarshan Kendra, J.C.Nagar, Bangalore.
19. The Director, Department of Printing & Stationery, Bangalore.
20. The Private Secretary to Hon'ble Chairman, Karnataka Legislative Council.
21. The Private Secretary to Hon'ble Deputy Chairman, Karnataka Legislative Council.
22. The Private Secretary to Hon'ble Leader of Opposition, Karnataka Legislative Council.
23. The Private Secretary to Hon'ble Government Chief Whip, Karnataka Legislative Council.
24. The Private Secretary to Hon'ble Opposition Chief Whip, Karnataka Legislative Council.
25. The Officers and Sections of Legislative Council for information.

**ಕರ್ನಾಟಕ ವಿಧಾನ ಪರಿಷತ್ತು**

**ಲಘು ಪ್ರಕಟಣೆ ಭಾಗ – 2**

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

ಸೋಮವಾರ, ದಿನಾಂಕ: 21ನೇ ಜನವರಿ, 2013

*****

**ಸಂಖ್ಯೆ:** 03

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಗಳ ನಿಯಮ 192ರ ಮೇರೆಗೆ ಮಾನ್ಯ ಸಭಾಪತಿಯವರು ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಗಣೇಶ್ ಕಾರ್ಣಿಕ್ ಅವರನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಗೆ ಸದಸ್ಯರನ್ನಾಗಿ ನಾಮ ನಿರ್ದೇಶನ ಮಾಡಿರುತ್ತಾರೆ.

**ವಿ.ಶ್ರೀಶ್**
**ಕಾರ್ಯದರ್ಶಿ**

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳಿಗೆ,**

# ಕರ್ನಾಟಕ ವಿಧಾನ ಪರಿಷತ್ತು

## ನೂರ ಇಪ್ಪತ್ತೊಂದನೆಯ ಅಧಿವೇಶನ

## ಲಘು ಪ್ರಕಟಣೆ ಭಾಗ - 2

**(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)**

**ಬುಧವಾರ, ದಿನಾಂಕ: 23ನೇ ಜನವರಿ, 2013**

ಸಂಖ್ಯೆ: 04

### ವಿಧಾನ ಪರಿಷತ್ತಿನ ಅಧಿವೇಶನದ ಪ್ರಾರಂಭದಲ್ಲಿ ರಾಜ್ಯಪಾಲರ ಭಾಷಣ ಮತ್ತು ವಿಧಾನ ಪರಿಷತ್ತಿನ ಉಪವೇಶನಗಳು ನಡೆಯುವ ಸ್ಥಳ

ಭಾರತ ಸಂವಿಧಾನದ 176ನೆಯ ಅನುಚ್ಛೇದದ (1)ನೆಯ ಖಂಡದಲ್ಲಿ ವಿಧಾಯಕವಾಗಿರುವಂತೆ ಬೆಂಗಳೂರಿನ ವಿಧಾನಸೌಧದಲ್ಲಿರುವ ವಿಧಾನ ಸಭಾ ಸಭಾಂಗಣದಲ್ಲಿ 2013ನೇ ಇಸವಿ **ಫೆಬ್ರವರಿ, 04ನೇ ಸೋಮವಾರ ಬೆಳಗ್ಗೆ 11.00 ಗಂಟೆಗೆ** ವಿಧಾನ ಮಂಡಲದ ಉಭಯ ಸದನಗಳ ಸದಸ್ಯರನ್ನುದ್ದೇಶಿಸಿ ಘನತೆವೆತ್ತ ರಾಜ್ಯಪಾಲರು ಭಾಷಣ ಮಾಡುತ್ತಾರೆಂಬುದನ್ನು ಮಾನ್ಯ ಸದಸ್ಯರಿಗೆ ಈ ಮೂಲಕ ತಿಳಿಸಲಾಗಿದೆ.

ಘನತೆವೆತ್ತ ರಾಜ್ಯಪಾಲರು ಭಾಷಣವನ್ನು ಮುಕ್ತಾಯಗೊಳಿಸಿ ಸಭಾಂಗಣದಿಂದ ತೆರಳಿದ ನಂತರ ಸದಸ್ಯರು ನಿರ್ಗಮಿಸುತ್ತಾರೆ. ಜಂಟಿ ಅಧಿವೇಶನವು ಮುಕ್ತಾಯಗೊಂಡ ಕೂಡಲೇ ವಿಧಾನ ಪರಿಷತ್ತು ಪುನ: ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಸಭೆ ಸೇರುತ್ತದೆ.

### 04ನೇ ಫೆಬ್ರವರಿ, 2013ನೆಯ ಸೋಮವಾರ ಕರ್ನಾಟಕ ವಿಧಾನ ಸಭೆಯ ಮತ್ತು ವಿಧಾನ ಪರಿಷತ್ತಿನ ಸದಸ್ಯರನ್ನುದ್ದೇಶಿಸಿ ಘನತೆವೆತ್ತ ರಾಜ್ಯಪಾಲರು ಭಾಷಣ ಮಾಡುವ ಸಂದರ್ಭದಲ್ಲಿ ಅನುಸರಿಸಬೇಕಾದ ವಿಧಾನ:-

ಘನತೆವೆತ್ತ ರಾಜ್ಯಪಾಲರು **ಬೆಳಿಗ್ಗೆ 10.55 ಗಂಟೆಗೆ** ವಿಧಾನಸೌಧದ ಮಹಾದ್ವಾರದ ಮೆಟ್ಟಿಲುಗಳ ಬಳಿಗೆ ಆಗಮಿಸುವರು. ತಮ್ಮ ಕಾರಿನಿಂದ ಇಳಿದ ಬಳಿಕ ಘನತೆವೆತ್ತ ರಾಜ್ಯಪಾಲರನ್ನು ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರು ಮತ್ತು ವಿಧಾನ ಸಭೆಯ ಮಾನ್ಯ ಸಭಾಧ್ಯಕ್ಷರು, ವಿಧಾನ ಪರಿಷತ್ತಿನ ಮತ್ತು ವಿಧಾನ ಸಭೆಯ ಕಾರ್ಯದರ್ಶಿಗಳು ಸ್ವಾಗತಿಸಿ, ಮಹಾದ್ವಾರದಿಂದ ಕರೆದುಕೊಂಡು ಬರುವರು. ಅಲ್ಲಿ ಈ ಕೆಳಕಂಡ ಕ್ರಮದಲ್ಲಿ ಮೆರವಣಿಗೆಯನ್ನು ರೂಪಿಸಲಾಗುವುದು.

| | | |
|---|---|---|
| **ಕಾರ್ಯದರ್ಶಿ<br>ವಿಧಾನ ಸಭೆ** | | **ಕಾರ್ಯದರ್ಶಿ<br>ವಿಧಾನ ಪರಿಷತ್ತು** |
| **ಮಾನ್ಯ ಸಭಾಧ್ಯಕ್ಷರು** | | **ಮಾನ್ಯ ಸಭಾಪತಿಯವರು** |
| **ಮಾನ್ಯ ಮುಖ್ಯ ಮಂತ್ರಿಗಳು** | **ಘನತೆವೆತ್ತ ರಾಜ್ಯಪಾಲರು** | **ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು** |
| | **ಎ.ಡಿ.ಸಿ** | |

..2..

ಈ ಮೆರವಣಿಗೆಯು ವಿಧಾನಸಭಾ ಸಭಾಂಗಣದ ಕಡೆಗೆ ತಿರುಗುವುದು. ವಿಧಾನಸಭಾ ಸಭಾಂಗಣದ ದ್ವಾರದ ಬಳಿ ಮೆರವಣಿಗೆ ಬಂದ ಕೂಡಲೇ ಘನತೆವೆತ್ತ ರಾಜ್ಯಪಾಲರ ಆಗಮನವನ್ನು ಸಭೆಗೆ ದಂಡನಾಯಕರು ತಿಳಿಸುವರು. ಘನತೆವೆತ್ತ ರಾಜ್ಯಪಾಲರು ವೇದಿಕೆಯ ಮೇಲೆ ಕುಳಿತುಕೊಳ್ಳುವ ತನಕ ಮಾನ್ಯ ಸದಸ್ಯರುಗಳು ಎದ್ದು ನಿಂತುಕೊಂಡಿರಬೇಕೆಂದು ಕೋರಲಾಗಿದೆ. ಮೆರವಣಿಗೆಯು ವೇದಿಕೆಯ ಕಡೆ ಮುಂದುವರೆಯುವುದು. ಸಭಾಭವನದ ವೇದಿಕೆಯ ಮುಂದೆ ಬಂದ ಬಳಿಕ ಮೆರವಣಿಗೆಯು ವಿಭಾಗವಾಗುವುದು. ಘನತೆವೆತ್ತ ರಾಜ್ಯಪಾಲರು ವೇದಿಕೆಯ ಮೇಲೆ ಬಂದು ತಮ್ಮ ಆಸನವನ್ನು ತಲುಪಿದ ಕೂಡಲೇ ರಾಷ್ಟ್ರಗೀತೆಯನ್ನು ನುಡಿಸಲಾಗುವುದು. **ವೇದಿಕೆಯ ಮೇಲೆ ಸಭಾಪತಿಯವರು ಘನತೆವೆತ್ತ ರಾಜ್ಯಪಾಲರ ಎಡಭಾಗದಲ್ಲಿಯೂ, ಸಭಾಧ್ಯಕ್ಷರು ಬಲಭಾಗದಲ್ಲಿಯೂ ಕುಳಿತುಕೊಳ್ಳುವರು.** ಘನತೆವೆತ್ತ ರಾಜ್ಯಪಾಲರು ಮಧ್ಯದಲ್ಲಿರುವ ಆಸನದಲ್ಲಿ ಕುಳಿತುಕೊಳ್ಳುವರು. ಕಾರ್ಯದರ್ಶಿಗಳು ವೇದಿಕೆ ಮುಂದುಗಡೆ ಇರುವ ಆಸನದಲ್ಲಿ ಕುಳಿತುಕೊಳ್ಳುವರು. ನಂತರ ಘನತೆವೆತ್ತ ರಾಜ್ಯಪಾಲರು ಸಭೆಯನ್ನುದ್ದೇಶಿಸಿ ಭಾಷಣವನ್ನು ಓದುವರು. ಸದಸ್ಯರನ್ನುದ್ದೇಶಿಸಿ ಘನತೆವೆತ್ತ ರಾಜ್ಯಪಾಲರು ಭಾಷಣ ಪ್ರಾರಂಭಿಸುವುದಕ್ಕೆ ಮೊದಲು ಅಥವಾ ಭಾಷಣ ಮಾಡುತ್ತಾ ಇರುವಾಗ ಅಥವಾ ಭಾಷಣ ಪ್ರಾರಂಭಿಸುವಾಗ ಅಥವಾ ಮುಗಿಸಿದ ನಂತರ ಯಾವ ಸಬಸ್ಯರಾಗಲಿ ಭಾಷಣ ಮಾಡುವುದರ, ಕ್ರಿಯಾಲೋಪ ಸೂಚಿಸುವುದರ, ಸಭಾತ್ಯಾಗ ಮಾಡುವುದರ ಮೂಲಕವಾಗಿ ಅಥವಾ ಇನ್ಯಾವುದೇ ವಿಧದಿಂದ ಅಡ್ಡಿ ಅಥವಾ ಅಡಚಣೆಗಳನ್ನು ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ಮಾಡದಿರುವುದು ಸಂಪ್ರದಾಯವಾಗಿದೆ. ಭಾಷಣದ ನಂತರ ರಾಷ್ಟ್ರಗೀತೆಯನ್ನು ಪುನ: ನುಡಿಸಲಾಗುವುದು.

ಘನತೆವೆತ್ತ ರಾಜ್ಯಪಾಲರು ಮೆರವಣಿಗೆಯಲ್ಲಿ ಸಭಾಂಗಣವನ್ನು ಪ್ರವೇಶಿಸಿದ ರೀತಿಯಲ್ಲಿಯೇ ಸಭಾಂಗಣದಿಂದ ತೆರಳುವರು. ಮೆರವಣಿಗೆಯು ಮಹಾದ್ವಾರದ ಬಳಿ ಮುಕ್ತಾಯವಾಗುವುದು. ನಂತರ ಸಭಾಪತಿಯವರು, ಸಭಾಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ಘನತೆವೆತ್ತ ರಾಜ್ಯಪಾಲರನ್ನು ಬೀಳ್ಕೊಡುವರು. ಘನತೆವೆತ್ತ ರಾಜ್ಯಪಾಲರು ಸಭಾಂಗಣದಿಂದ ಹೊರಗೆ ತೆರಳುವವರೆಗೆ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತಿರಬೇಕು.

## ರಾಜ್ಯಪಾಲರ ಭಾಷಣಕ್ಕೆ ಕೃತಜ್ಞತಾ ಸೂಚನೆಯ ಪ್ರಸ್ತಾವ ಮತ್ತು ಅದಕ್ಕೆ ಸಂಬಂಧಿಸಿದ ತಿದ್ದುಪಡಿಗಳು

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಾವಳಿಯ ನಿಯಮಗಳು 19 ಮತ್ತು 20ರಲ್ಲಿ ಸದಸ್ಯರೊಬ್ಬರು ಮತ್ತೊಬ್ಬ ಸದಸ್ಯರಿಂದ ಅನುಮೋದಿಸಲ್ಪಟ್ಟ **ಘನತೆವೆತ್ತ** ರಾಜ್ಯಪಾಲರ ಭಾಷಣಕ್ಕೆ ಕೃತಜ್ಞತಾ ಸೂಚನೆಯ ಪ್ರಸ್ತಾವವನ್ನು ಮಂಡಿಸುವ ಅವಕಾಶವಿದೆ. ಆದುದರಿಂದ, **ಘನತೆವೆತ್ತ** ರಾಜ್ಯಪಾಲರು ಮಾಡಿದ ಭಾಷಣಕ್ಕಾಗಿ ಅವರಿಗೆ ಸಮರ್ಪಿಸುವ ಕೃತಜ್ಞತಾ ಸೂಚನೆಯ ಪ್ರಸ್ತಾವದ ಸೂಚನೆಯನ್ನು 2013ನೇ ಇಸವಿಯ ಫೆಬ್ರವರಿ, 4ನೇ ಸೋಮವಾರ ಮಧ್ಯಾಹ್ನ 3.00 ಗಂಟೆಯವರೆಗೂ ಮತ್ತು ಆ ಪ್ರಸ್ತಾವಕ್ಕೆ ಸಂಬಂಧಿಸಿದ ತಿದ್ದುಪಡಿಗಳ ಸೂಚನೆಯನ್ನು 2013ನೇ ಇಸವಿ ಫೆಬ್ರವರಿ, 5ರಂದು ಮಂಗಳವಾರ ಬೆಳಿಗ್ಗೆ 11.00 ಗಂಟೆಯವರೆವಿಗೂ ಕೊಡಬಹುದೆಂದು ಮಾನ್ಯ ಸಭಾಪತಿಯವರು ಗೊತ್ತುಪಡಿಸಿದ್ದಾರೆ.

**ವಿ. ಶ್ರೀಶ್**
ಕಾರ್ಯದರ್ಶಿ.

**ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಸದಸ್ಯರುಗಳಿಗೆ**

# KARNATAKA LEGISLATIVE COUNCIL

HUNDRED AND TWENTY FIRST SESSION
**BULLETIN PART – II**

(General information relating to Parliamentary and other matters)
Wednesday, the 23rd January, 2013

No. 04

## ADDRESS BY HIS EXCELLENCY THE GOVERNOR AT THE COMMENCEMENT OF THE SESSION AND PLACE OF MEETING OF THE COUNCIL.

Hon'ble Members are hereby informed that as required by Clause (1) of Article 176 of the Constitution, His Excellency the Governor will address the members of both the Houses of Legislature assembled in the Legislative Assembly Chamber, Vidhana Soudha, Bangalore at 11.00 A.M. on Monday, the 04th February, 2013.

As soon as His Excellency the Governor concludes the Address and leaves the Chamber, the members will disperse. Soon after the Joint Session, the Legislative Council will again meet at the Legislative Council Chamber.

## PROCEDURE TO BE OBSERVED ON THE OCCASION OF THE GOVERNOR'S ADDRESS BY THE MEMBERS OF KARNATAKA LEGISLATIVE ASSEMBLY AND COUNCIL ON MONDAY, THE 04TH FEBRUARY, 2013.

His Excellency the Governor will arrive at the grand steps of the main entrance to the Vidhana Soudha at 10.55 A.M. On alighting from the car, Governor will be received by Hon'ble Chairman, Hon'ble Speaker, the Secretary Karnataka Legislative Council and the Secretary, Karnataka Legislative Assembly.

At the main entrance a procession will be formed in the following order:-

| | | |
|---|---|---|
| **Secretary Legislative Assembly** | | **Secretary Legislative Council** |
| Hon'ble Speaker | | Hon'ble Chairman |
| **Hon'ble Chief Minister** | **His Excellency the Governor** | **Hon'ble minister for Parliamentary Affairs** |
| | A.D.C | |

The procession in this form will proceed to the Legislative Assembly Chamber. The Marshal announces the arrival of His Excellency the Governor. Hon'ble Members are requested to remain standing until His Excellency the Governor takes the seat on the dais. The procession will proceed towards the dais. On reaching the Floor of the House in front of the dais, the procession bifurcates. On reaching the dais and before the Governor takes the seat, **National Anthem will be played. On the dais, the Hon'ble Chairman will sit on the Governor's left and Hon'ble Speaker on the right. The Governor occupies the central seat.** The Secretaries take their seat in front of the dais.

His Excellency The Governor will then read the address. It is a convention that no member shall obstruct or interrupt the Address either before or after the Address or during its duration with any speech, point of order, walk-out at in any other manner. The National Anthem will again be played on the conclusion of the Address.

The Governor will leave the Chamber in procession in the same order in which the procession entered the Chamber. The procession will reach the main entrance and the Governor will be seen off by the Chairman, Speaker and Secretaries.

All the Hon'ble Members will raise and remain standing until the Governor proceeds and leaves the Chamber.

## GOVERNOR'S ADDRESS-MOTION OF THANKS AND AMENDMENTS THERETO

Rules 19 and 20 of the Rules of Procedure and Conduct of Business in the Karnataka Legislative Council provide for a Motion of Thanks to the Governor's Address being moved by a member and seconded by another member. The Hon'ble Chairman has been pleased to fix 3.00 P.M. on 4th February, 2013 as the last hour and date for receipt of a Notice of the Motion of Thanks and 11.00 A.M. on 5th February, 2013 as the last hour and date for receipt of the amendments thereto.

**V. SHREESH**
**Secretary**

To:

**All the Members of Karnataka Legislative Council.**

# ಕರ್ನಾಟಕ ವಿಧಾನ ಪರಿಷತ್ತು

## <u>ಲಘು ಪ್ರಕಟಣೆ ಭಾಗ - 2</u>

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

ಸೋಮವಾರ, ದಿನಾಂಕ: 04ನೇ ಫೆಬ್ರವರಿ, 2013

**ಸಂಖ್ಯೆ: 06**

ಬೆಳಗಾವಿಯ ಸುವರ್ಣ ವಿಧಾನ ಸೌಧದಲ್ಲಿ ನಡೆದ 120ನೇ ವಿಧಾನ ಪರಿಷತ್ತಿನ ಅಧಿವೇಶನದಲ್ಲಿ ತೆಗೆದ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳ ಗ್ರೂಪ್ ಫೋಟೋ ಪ್ರತಿಗಳನ್ನು ವಿಧಾನ ಸೌಧದ ಮೊದಲನೆಯ ಮಹಡಿಯಲ್ಲಿರುವ ಕೊಠಡಿ ಸಂಖ್ಯೆ: 156 'ಸಿ" ರಲ್ಲಿ ವಿತರಿಸಲಾಗುತ್ತಿದೆ. ಮಾನ್ಯ ಸದಸ್ಯರುಗಳು ಖುದ್ದಾಗಿ ಅಥವಾ ಆಪ್ತ ಸಹಾಯಕರ ಮೂಲಕ ಪಡೆಯಲು ಈ ಮೂಲಕ ತಿಳಿಸಲಾಗಿದೆ.

**ವಿ.ಶ್ರೀಶ್**
**ಕಾರ್ಯದರ್ಶಿ**

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳಿಗೆ**

# ಕರ್ನಾಟಕ ವಿಧಾನ ಪರಿಷತ್ತು

## <u>ಲಘು ಪ್ರಕಟಣೆ ಭಾಗ – 2</u>

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

ಸೋಮವಾರ, ದಿನಾಂಕ: 04ನೇ ಫೆಬ್ರವರಿ, 2013

**ಸಂಖ್ಯೆ:** 07

ದಿನಾಂಕ: 06.02.2013 ರಿಂದ 10.02.2013ರವರೆಗೆ ನಡೆಯಲಿರುವ **"ಏರೋ ಶೋ 2013"** ರ ಪ್ರವೇಶ ಪತ್ರಗಳನ್ನು ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಸದಸ್ಯರುಗಳಿಗೆ ದಿನಾಂಕ: 05.02.2013 ರಿಂದ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ವಿತರಿಸಲಾಗುತ್ತಿದೆ. ಮಾನ್ಯ ಸದಸ್ಯರುಗಳು ಪ್ರವೇಶ ಪತ್ರದೊಂದಿಗೆ **"ಭದ್ರತಾ ತಪಾಸಣಾ"** ದೃಷ್ಟಿಯಿಂದ ಕಡ್ಡಾಯವಾಗಿ ತಮ್ಮ ಗುರುತಿನ ಚೀಟಿಯನ್ನು ತೆಗೆದುಕೊಂಡು ಹೋಗಬೇಕೆಂದು ಈ ಮೂಲಕ ತಿಳಿಸಲಾಗಿದೆ.

**ವಿ.ಶ್ರೀಶ್**
**ಕಾರ್ಯದರ್ಶಿ**

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳಿಗೆ,**

# ಕರ್ನಾಟಕ ವಿಧಾನ ಪರಿಷತ್ತು

## ಲಘು ಪ್ರಕಟಣೆ ಭಾಗ – 2

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

ಮಂಗಳವಾರ, ದಿನಾಂಕ: 05ನೇ ಫೆಬ್ರವರಿ, 2013

**ಸಂಖ್ಯೆ: 08**

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 9ರ ಮೇರೆಗೆ ಸಭಾಪತಿಯವರ ಮತ್ತು ಉಪ ಸಭಾಪತಿಯವರ ಗೈರುಹಾಜರಿಯಲ್ಲಿ ಸಭಾಪತಿಯವರ ಸ್ಥಾನದಲ್ಲಿ ಪದಧಾರಣೆ ಮಾಡುವಂತೆ 120ನೇ ಅಧಿವೇಶನದಲ್ಲಿ ನಾಮನಿರ್ದೇಶನ ಮಾಡಲಾದ ಈ ಕೆಳಕಂಡ ಸದಸ್ಯರುಗಳನ್ನೇ ಪ್ರಸಕ್ತ ಅಧಿವೇಶನಕ್ಕೂ ಮುಂದುವರೆಸಲಾಗಿದೆ ಎಂದು ಮಾನ್ಯ ಸದಸ್ಯರುಗಳಿಗೆ ಈ ಮೂಲಕ ತಿಳಿಸಲಾಗಿದೆ.

01. ಶ್ರೀ ಬಸವರಾಜ ಹೊರಟ್ಟಿ
02. ಶ್ರೀ ಕೆ.ಬಿ.ಶಾಣಪ್ಪ
03. ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ
04. ಶ್ರೀ ಡಿ.ಎಸ್.ವೀರಯ್ಯ

**ವಿ.ಶ್ರೀಶ್**
**ಕಾರ್ಯದರ್ಶಿ**

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳಿಗೆ,**

# ಕರ್ನಾಟಕ ವಿಧಾನ ಪರಿಷತ್ತು

## ನೂರ ಇಪ್ಪತ್ತೊಂದನೆ ಅಧಿವೇಶನ

## ಲಘು ಪ್ರಕಟಣೆ ಭಾಗ-2

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಮಂಗಳವಾರ, ದಿನಾಂಕ: 05ನೇ ಫೆಬ್ರವರಿ, 2013**

**ಸಂಖ್ಯೆ: 09**

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 222 ರ ಮೇರೆಗೆ ಕಳೆದ ಅಧಿವೇಶನದಲ್ಲಿ ರಚಿಸಲಾದ ಕಾರ್ಯಕಲಾಪಗಳ ಸಲಹಾ ಸಮಿತಿಯ ಸದಸ್ಯರುಗಳನ್ನೇ ಪ್ರಸ್ತುತ 121ನೇ ಅಧಿವೇಶನದಲ್ಲಿ ಮಾನ್ಯ ಸಭಾಪತಿಯವರು ಮುಂದುವರಿಸಿರುತ್ತಾರೆಂದು ಈ ಮೂಲಕ ತಿಳಿಸಲಾಗಿದೆ.

**ಶ್ರೀಯುತರುಗಳಾದ:**

| | | | |
|---|---|---|---|
| 01. | **ಶ್ರೀಮತಿ ವಿಮಲಾಗೌಡ**<br>ಮಾನ್ಯ ಉಪ ಸಭಾಪತಿಗಳು | : | ಸದಸ್ಯರು |
| 02. | **ವಿ. ಸೋಮಣ್ಣ**<br>ಮಾನ್ಯ ಸಭಾನಾಯಕರು | : | ಸದಸ್ಯರು |
| 03. | **ಎಸ್.ಆರ್. ಪಾಟೀಲ್**<br>ವಿಧಾನ ಪರಿಷತ್ತಿನ ಮಾನ್ಯ ವಿರೋಧ ಪಕ್ಷದ ನಾಯಕರು | : | ಸದಸ್ಯರು |
| 04. | **ಡಾ: ಎ.ಹೆಚ್. ಶಿವಯೋಗಿಸ್ವಾಮಿ**<br>ವಿಧಾನ ಪರಿಷತ್ತಿನ ಮಾನ್ಯ ಸರ್ಕಾರಿ ಮುಖ್ಯ ಸಚೇತಕರು | : | ಸದಸ್ಯರು |
| 05. | **ಆರ್.ವಿ. ವೆಂಕಟೇಶ್**<br>ವಿಧಾನ ಪರಿಷತ್ತಿನ ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು | : | ಸದಸ್ಯರು |
| 06. | **ಮತ್ತಿಕಟ್ಟೆ ವೀರಣ್ಣ**<br>ವಿಧಾನ ಪರಿಷತ್ತಿನ ಸದಸ್ಯರು | : | ಸದಸ್ಯರು |
| 07. | **ಯಂ.ಸಿ. ನಾಣಯ್ಯ**<br>ವಿಧಾನ ಪರಿಷತ್ತಿನ ಸದಸ್ಯರು | : | ಸದಸ್ಯರು |
| 08. | **ಕ್ಯಾಪ್ಟನ್ ಗಣೇಶ್ ಕಾರ್ಣಿಕ್**<br>ವಿಧಾನ ಪರಿಷತ್ತಿನ ಸದಸ್ಯರು | : | ಸದಸ್ಯರು |

**...2**

## ವಿಶೇಷ ಆಹ್ವಾನಿತರು

ಶ್ರೀಯುತರುಗಳಾದ:

| | | | |
|---|---|---|---|
| 1 | **ಜಗದೀಶ್ ಶೆಟ್ಟರ್** | : | ಮಾನ್ಯ ಮುಖ್ಯಮಂತ್ರಿಗಳು |
| 2 | **ಎಸ್. ಸುರೇಶ್ ಕುಮಾರ್** | : | ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಸಚಿವರು |
| 3 | **ಬಸವರಾಜ ಹೊರಟ್ಟಿ** | : | ವಿಧಾನ ಪರಿಷತ್ತಿನ ಸದಸ್ಯರು |

**ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 222 ರ ಮೇರೆಗೆ ಮಾನ್ಯ ಸಭಾಪತಿಯವರು ಸಮಿತಿಯ ಅಧ್ಯಕ್ಷರಾಗಿರುತ್ತಾರೆ.**

**ವಿ. ಶ್ರೀಶ್**
ಕಾರ್ಯದರ್ಶಿ

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳಿಗೆ,

# ಕರ್ನಾಟಕ ವಿಧಾನ ಪರಿಷತ್ತು

## ನೂರ ಇಪ್ಪತ್ತೊಂದನೆಯ ಅಧಿವೇಶನ

## ಲಘು ಪ್ರಕಟಣೆ ಭಾಗ – 2

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಮಂಗಳವಾರ, ದಿನಾಂಕ: 05ನೇ ಫೆಬ್ರವರಿ, 2013**

**ಸಂಖ್ಯೆ:** 10

ವಿಧಾನ ಪರಿಷತ್ತಿನ ಕಾರ್ಯಕಲಾಪಗಳ ಸಲಹಾ ಸಮಿತಿಯು ದಿನಾಂಕ: 05.02.2013 ರಂದು ಸಭೆ ಸೇರಿ ವಿಧಾನ ಪರಿಷತ್ತಿನ 121ನೇ ಅಧಿವೇಶನದ ಉಪವೇಶನದಲ್ಲಿ ದಿನಾಂಕ: 06.02.2013 ರಿಂದ 15.02.2013 ರವರೆಗೆ ಈ ಕೆಳಕಂಡಂತೆ ಕಾರ್ಯಕಲಾಪಗಳನ್ನು ನಡೆಸಲು ತೀರ್ಮಾನಿಸಲಾಗಿರುತ್ತದೆಂದು ಮಾನ್ಯ ಸದಸ್ಯರುಗಳ ಗಮನಕ್ಕೆ ತರಲಾಗಿದೆ.

**ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯಕಲಾಪಗಳ ವಿವರ**

| **ದಿನಾಂಕ ಮತ್ತು ವಾರ** | **ಸಮಯ** | **ವಿವರ** |
|---|---|---|
| 06.02.2013 ಬುಧವಾರ | ಬೆಳಿಗ್ಗೆ 11.00 ಗಂಟೆಯಿಂದ<br><br>ಅಪರಾಹ್ನ 3 ರಿಂದ 6 ಗಂಟೆಯವರೆಗೆ | 1. ಪ್ರಶ್ನೋತ್ತರ;<br>2. ಗಮನ ಸೆಳೆಯುವ ಸೂಚನೆ;<br>3. ನಿಯಮ 330;<br>4. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲೆ ಚರ್ಚೆ |
| 07.02.2013 ಗುರುವಾರ | ಬೆಳಿಗ್ಗೆ 11.00 ಗಂಟೆಯಿಂದ<br><br>ಅಪರಾಹ್ನ 3 ರಿಂದ 6 ಗಂಟೆಯವರೆಗೆ | 1. ಪ್ರಶ್ನೋತ್ತರ;<br>2. ಗಮನ ಸೆಳೆಯುವ ಸೂಚನೆ;<br>3. ನಿಯಮ 330;<br>4. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲೆ ಮುಂದುವರೆದ ಚರ್ಚೆ ಹಾಗೂ ಸರ್ಕಾರದಿಂದ ಉತ್ತರ |
| 08.02.2013 ಶುಕ್ರವಾರ | ಮಧ್ಯಾಹ್ನ 12.30 ಗಂಟೆಗೆ | 1. ಆಯವ್ಯಯ ಮಂಡನೆ |
| 09.02.2013 ಶನಿವಾರ | ಸಾರ್ವತ್ರಿಕ ರಜಾದಿನ | |
| 10.02.2013 ಭಾನುವಾರ | **ಸಾರ್ವತ್ರಿಕ ರಜಾದಿನ** | |

..2..

| | | |
|---|---|---|
| 11.02.2013<br>ಸೋಮವಾರ | ಬೆಳಿಗ್ಗೆ 11.00 ಗಂಟೆಯಿಂದ | 1. ಪ್ರಶ್ನೋತ್ತರ;<br>2. ಗಮನ ಸೆಳೆಯುವ ಸೂಚನೆ;<br>3. ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ;<br>4. ವಿಧೇಯಕಗಳ ಮಂಡನೆ, ಪರ್ಯಾಲೋಚನೆ ಹಾಗೂ ಅಂಗೀಕಾರ;<br>5. ನಿಯಮ 330;<br>6. ನಿಯಮ 68ರ ಅಡಿಯಲ್ಲಿ ಚರ್ಚೆ |
| 12.02.2013<br>ಮಂಗಳವಾರ | ಬೆಳಿಗ್ಗೆ 11.00 ಗಂಟೆಯಿಂದ | 1. ಪ್ರಶ್ನೋತ್ತರ;<br>2. ಗಮನ ಸೆಳೆಯುವ ಸೂಚನೆ;<br>3. ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ;<br>4. ವಿಧೇಯಕಗಳ ಮಂಡನೆ, ಪರ್ಯಾಲೋಚನೆ ಹಾಗೂ ಅಂಗೀಕಾರ;<br>5. ನಿಯಮ 330;<br>6. ನಿಯಮ 68ರ ಅಡಿಯಲ್ಲಿ ಚರ್ಚೆ |
| 13.02.2013<br>ಬುಧವಾರ | ಬೆಳಿಗ್ಗೆ 11.00 ಗಂಟೆಯಿಂದ | 1. ಪ್ರಶ್ನೋತ್ತರ;<br>2. ಗಮನ ಸೆಳೆಯುವ ಸೂಚನೆ;<br>3. ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ;<br>4. ವಿಧೇಯಕಗಳ ಮಂಡನೆ, ಪರ್ಯಾಲೋಚನೆ ಹಾಗೂ ಅಂಗೀಕಾರ;<br>5. ನಿಯಮ 330;<br>6. ನಿಯಮ 68ರ ಅಡಿಯಲ್ಲಿ ಚರ್ಚೆ |
| 14.02.2013<br>ಗುರುವಾರ | ಬೆಳಿಗ್ಗೆ 11.00 ಗಂಟೆಯಿಂದ | 1. ಗಮನ ಸೆಳೆಯುವ ಸೂಚನೆ;<br>2. ಆಯವ್ಯಯದ ಮೇಲೆ ಮುಂದುವರೆದ ಚರ್ಚೆ ಹಾಗೂ ಸರ್ಕಾರದಿಂದ ಉತ್ತರ;<br>3. ವಿಧೇಯಕಗಳ ಮಂಡನೆ, ಪರ್ಯಾಲೋಚನೆ ಹಾಗೂ ಅಂಗೀಕಾರ;<br>4. ನಿಯಮ 330;<br>5. ನಿಯಮ 68ರ ಅಡಿಯಲ್ಲಿ ಚರ್ಚೆ |
| 15.02.2013<br>ಶುಕ್ರವಾರ | ಬೆಳಿಗ್ಗೆ 10.00 ಗಂಟೆಯಿಂದ | 1. ಗಮನ ಸೆಳೆಯುವ ಸೂಚನೆ;<br>2. ವಿಧೇಯಕಗಳ ಮಂಡನೆ, ಪರ್ಯಾಲೋಚನೆ ಹಾಗೂ ಅಂಗೀಕಾರ;<br>3. ನಿಯಮ 330;<br>4. ನಿಯಮ 68ರ ಅಡಿಯಲ್ಲಿ ಚರ್ಚೆ |

**ವಿ. ಶ್ರೀಶ್**
**ಕಾರ್ಯದರ್ಶಿ**

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳಿಗೆ**

# ಕರ್ನಾಟಕ ವಿಧಾನ ಪರಿಷತ್ತು

## ಲಘು ಪ್ರಕಟಣೆ ಭಾಗ – 2

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

ಬುಧವಾರ, ದಿನಾಂಕ: 06ನೇ ಫೆಬ್ರವರಿ, 2013

**ಸಂಖ್ಯೆ: 11**

ಬೆಂಗಳೂರಿನಲ್ಲಿ ನಡೆಯುತ್ತಿರುವ "ಏರೋ ಶೋ 2013" ಇಂಡಿಯಾ ಪ್ರದರ್ಶನವನ್ನು ವೀಕ್ಷಿಸಲು ವಿಧಾನ ಪರಿಷತ್ತಿನ ಅನೇಕ ಮಾನ್ಯ ಸದಸ್ಯರುಗಳು ಅಪೇಕ್ಷೆಪಟ್ಟಿರುವ ಹಿನ್ನೆಲೆಯಲ್ಲಿ ಇಂದು ಸದನದಲ್ಲಿ ಪ್ರಕಟಿಸಿರುವಂತೆ ನಾಳಿನ ಉಪವೇಶನವು ಬೆಳಗ್ಗೆ 11.00ರ ಬದಲಾಗಿ ಮಧ್ಯಾಹ್ನ 02.30ಗಂಟೆಗೆ ಸೇರಲಿರುವುದೆಂದು ಈ ಮೂಲಕ ತಿಳಿಸಲಾಗಿದೆ.

**ವಿ. ಶ್ರೀಶ್**
**ಕಾರ್ಯದರ್ಶಿ**

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳಿಗೆ**

# ಕರ್ನಾಟಕ ವಿಧಾನ ಪರಿಷತ್ತು

## ಲಘು ಪ್ರಕಟಣೆ ಭಾಗ - 2

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

ಮಂಗಳವಾರ, ದಿನಾಂಕ: 12ನೇ ಫೆಬ್ರವರಿ, 2013

**ಸಂಖ್ಯೆ:** 12

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಗಳ ನಿಯಮ 192ರ ಮೇರೆಗೆ ಮಾನ್ಯ ಸಭಾಪತಿಯವರು ಈ ಕೆಳಕಂಡ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರುಗಳನ್ನು ಖಾಸಗಿ ಸದಸ್ಯರುಗಳ ವಿಧೇಯಕಗಳ ಮತ್ತು ನಿರ್ಣಯಗಳ ಸಮಿತಿಗೆ ಸದಸ್ಯರುಗಳನ್ನಾಗಿ ನಾಮ ನಿರ್ದೇಶನ ಮಾಡಿರುತ್ತಾರೆ.

01. ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ
02. ಶ್ರೀ ಮರಿತಿಬ್ಬೇಗೌಡ
03. ಶ್ರೀ ಮೋಹನ್ ಎ. ಲಿಂಬೀಕಾಯಿ
04. ಶ್ರೀ ಆರ್.ಕೆ. ಸಿದ್ದರಾಮಣ್ಣ
05. ಶ್ರೀ ಅಲ್ಲಮ ಪ್ರಭು ಪಾಟೀಲ್

**ವಿ. ಶ್ರೀಶ್**
**ಕಾರ್ಯದರ್ಶಿ**

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳಿಗೆ**

**ಕರ್ನಾಟಕ ವಿಧಾನ ಪರಿಷತ್ತು**

**<u>ಲಘು ಪ್ರಕಟಣೆ ಭಾಗ – 2</u>**

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

ಗುರುವಾರ, ದಿನಾಂಕ: 7ನೇ ಮಾರ್ಚ್, 2013

*****

**ಸಂಖ್ಯೆ: 13**

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಗಳ ನಿಯಮ 192ರ ಮೇರೆಗೆ ಮಾನ್ಯ ಸಭಾಪತಿಯವರು ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ ಅವರನ್ನು ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ ಸಮಿತಿಯಲ್ಲಿ ಖಾಲಿಯಿರುವ ಸ್ಥಾನಕ್ಕೆ ಸದಸ್ಯರನ್ನಾಗಿ ನಾಮ ನಿರ್ದೇಶನ ಮಾಡಿರುತ್ತಾರೆ.

**ವಿ.ಶ್ರೀಶ್**
**ಕಾರ್ಯದರ್ಶಿ**

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳಿಗೆ,**

# ಕರ್ನಾಟಕ ವಿಧಾನ ಪರಿಷತ್ತು

ಲಘು ಪ್ರಕಟಣೆ ಭಾಗ – 2

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಮಂಗಳವಾರ, ದಿನಾಂಕ: 12ನೇ ಮಾರ್ಚ್, 2013**

**ಸಂಖ್ಯೆ:** 14

## ವಿಧಾನ ಪರಿಷತ್ತಿನ ಅಧಿವೇಶನ ಮುಕ್ತಾಯಗೊಂಡಿರುವ ಬಗ್ಗೆ

ದಿನಾಂಕ 15ನೇ ಫೆಬ್ರವರಿ, 2013ರ ಶುಕ್ರವಾರದಂದು ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾದ ವಿಧಾನ ಪರಿಷತ್ತಿನ ನೂರ ಇಪ್ಪತ್ತೊಂದನೆಯ ಅಧಿವೇಶನವನ್ನು 12ನೇ ಮಾರ್ಚ್, 2013ರ DPAL/06/SAMVYAVI 2013ನೇ ಸಂಖ್ಯೆಯ ಅಧಿಸೂಚನೆಯ ಮೂಲಕ ಘನತೆವೆತ್ತ ರಾಜ್ಯಪಾಲರು ಮುಕ್ತಾಯಗೊಳಿಸಿರುತ್ತಾರೆ.

ವಿ. ಶ್ರೀಶ್
ಕಾರ್ಯದರ್ಶಿ

ಗೆ:

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳಿಗೆ

**ಪ್ರತಿಗಳು:**

01. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ಬೆಂಗಳೂರು.
02. ಭಾರತ ಸರ್ಕಾರದ ನ್ಯಾಯಾಂಗ ಇಲಾಖೆಯ ಕಾರ್ಯದರ್ಶಿಯವರಿಗೆ.
03. ಭಾರತ ಸರ್ಕಾರದ ಸಾಂಸದಿಕ ವ್ಯವಹಾರಗಳ ಇಲಾಖೆಯ ಕಾರ್ಯದರ್ಶಿಯವರಿಗೆ, ನವದೆಹಲಿ.
04. ಭಾರತ ಸರ್ಕಾರದ ಗೃಹ ಇಲಾಖೆಯ ಕಾರ್ಯದರ್ಶಿಯವರಿಗೆ, ನವದೆಹಲಿ.
05. ಪ್ರಧಾನ ಕಾರ್ಯದರ್ಶಿ, ಲೋಕಸಭೆ, ನವದೆಹಲಿ.

06. ಪ್ರಧಾನ ಕಾರ್ಯದರ್ಶಿ, ರಾಜ್ಯಸಭೆ, ನವದೆಹಲಿ.
07. ಕಾರ್ಯದರ್ಶಿ, ಭಾರತ ಚುನಾವಣಾ ಆಯೋಗ, ನವದೆಹಲಿ.
08. ರಾಜ್ಯಪಾಲರ ಕಾರ್ಯದರ್ಶಿ, ರಾಜಭವನ, ಕರ್ನಾಟಕ, ಬೆಂಗಳೂರು.
09. ಸ್ಥಾನೀಯ ಆಯುಕ್ತರು, ಕರ್ನಾಟಕ ಭವನ, ನವದೆಹಲಿ.
10. ಭಾರತ ಸರ್ಕಾರದ ಎಲ್ಲಾ ಇಲಾಖಾ ಕಾರ್ಯದರ್ಶಿಯವರಿಗೆ, ನವದೆಹಲಿ.
11. ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ, ಬೆಂಗಳೂರು.
12. ಅಡ್ವೊಕೇಟ್ ಜನರಲ್, ಉಚ್ಚ ನ್ಯಾಯಾಲಯ ಕಟ್ಟಡ, ಬೆಂಗಳೂರು.
13. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
14. ಕರ್ನಾಟಕ ಸರ್ಕಾರದ ಎಲ್ಲಾ ಇಲಾಖಾ ಕಾರ್ಯದರ್ಶಿಗಳಿಗೆ.
15. ಎಲ್ಲಾ ರಾಜ್ಯ ವಿಧಾನಮಂಡಲಗಳ ಕಾರ್ಯದರ್ಶಿಗಳಿಗೆ.
16. ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ಬೆಂಗಳೂರು.
17. ನಿರ್ದೇಶಕರು, ಆಕಾಶವಾಣಿ, ರಾಜಭವನ ರಸ್ತೆ, ಬೆಂಗಳೂರು.
18. ನಿರ್ದೇಶಕರು, ದೂರದರ್ಶನ ಕೇಂದ್ರ, ಜೆ.ಸಿ. ನಗರ, ಬೆಂಗಳೂರು.
19. ನಿರ್ದೇಶಕರು, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ಇಲಾಖೆ, ಬೆಂಗಳೂರು.
20. ಮಾನ್ಯ ಸಭಾಪತಿಯವರ ಆಪ್ತ ಕಾರ್ಯದರ್ಶಿಯವರಿಗೆ, ಕ.ವಿ.ಪ.
21. ಮಾನ್ಯ ಉಪ ಸಭಾಪತಿಯವರ ಆಪ್ತ ಕಾರ್ಯದರ್ಶಿಯವರಿಗೆ, ಕ.ವಿ.ಪ.
22. ಮಾನ್ಯ ವಿರೋಧ ಪಕ್ಷದ ನಾಯಕರ ಆಪ್ತ ಕಾರ್ಯದರ್ಶಿಯವರಿಗೆ, ಕ.ವಿ.ಪ.
23. ಮಾನ್ಯ ಸರ್ಕಾರಿ ಮುಖ್ಯ ಸಚೇತಕರ ಆಪ್ತ ಕಾರ್ಯದರ್ಶಿಯವರಿಗೆ, ಕ.ವಿ.ಪ.
24. ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರ ಆಪ್ತ ಕಾರ್ಯದರ್ಶಿಯವರಿಗೆ, ಕ.ವಿ.ಪ.
25. ಕರ್ನಾಟಕ ವಿಧಾನ ಪರಿಷತ್ತಿನ ಎಲ್ಲಾ ಅಧಿಕಾರಿಗಳಿಗೆ ಹಾಗೂ ಶಾಖೆಗಳ ಮಾಹಿತಿಗಾಗಿ.

# KARNATAKA LEGISLATIVE COUNCIL

BULLETIN PART-II

(General information relating to Parliamentary and other matters)

Tuesday, the 12th March, 2013

No. 14

## PROROGATION OF THE SESSION OF LEGISLATIVE COUNCIL

The Hundred and Twenty first Session of the Karnataka Legislative Council which was adjourned sine-die on Friday, the 15th February, 2013 has been prorogued by His Excellency the Governor vide Notification No. DPAL 06 SAMVYAVI 2013, dated: 12th March, 2013.

**V. SHREESH**

Secretary

**To:**

**The Hon'ble Members of Legislative Council**

**Copy to:**

01. The Chief Secretary to Government of Karnataka, Bangalore.
02. The Secretary to the Government of India, Ministry of law, New Delhi.
03. The Secretary to the Government of India, Department of parliamentary Affairs, New Delhi.
04. The Secretary to the Government of India, Ministry of Home Affairs, New Delhi.
05. The Secretary General, Lok Sabha, New Delhi.
06. The Secretary General, Rajya Sabha, New Delhi.
07. The Secretary, Election Commission of India, New Delhi.
08. The Secretary to Governor, Rajbhavan, Bangalore.
09. The Resident Commissioner, Karnataka Bhavan, New Delhi.
10. All the Secretaries to Government of India, New Delhi.
11. The Secretary, Karnataka Legislative Assembly, Bangalore.
12. The Advocate General, High Court Building, Bangalore.
13. The Accountant General of Karnataka, Bangalore.
14. All the Secretaries to the Government of Karnataka.
15. The Secretaries of all State Legislatures.
16. The Director of Information and Publicity, Bangalore
17. The Director, All India Radio, Rajbhavan Road, Bangalore.
18. The Director, Doordarshan Kendra, J.C.Nagar, Bangalore.
19. The Director, Department of Printing & Stationery, Bangalore.
20. The Private Secretary to Hon'ble Chairman, Karnataka Legislative Council.
21. The Private Secretary to Hon'ble Deputy Chairman, Karnataka Legislative Council.
22. The Private Secretary to Hon'ble Leader of Opposition, Karnataka Legislative Council.
23. The Private Secretary to Hon'ble Government Chief Whip, Karnataka Legislative Council.
24. The Private Secretary to Hon'ble Opposition Chief Whip, Karnataka Legislative Council.

**೨೫. The Officers and Sections of Legislative Council for information**

# ಕರ್ನಾಟಕ ವಿಧಾನ ಪರಿಷತ್ತು

## ಲಘು ಪ್ರಕಟಣೆ ಭಾಗ – 2

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

ಬುಧವಾರ, ದಿನಾಂಕ: 20ನೇ ಮಾರ್ಚ್, 2013

*****

**ಸಂಖ್ಯೆ:** 15

ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಪ್ರೊ:ಕೆ.ಆರ್.ಮಲ್ಲಿಕಾರ್ಜುನಪ್ಪ ಅವರು ದಿನಾಂಕ: 20.03.2013 ರಂದು ವಿಧಾನ ಪರಿಷತ್ತಿನ ತಮ್ಮ ಸದಸ್ಯತ್ವಕ್ಕೆ ಸಲ್ಲಿಸಿದ್ದ ರಾಜೀನಾಮೆಯನ್ನು ಮಾನ್ಯ ಸಭಾಪತಿಯವರು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 185(2)ರ ಮೇರೆಗೆ ಅಂಗೀಕರಿಸಿರುತ್ತಾರೆಂದು ಮಾನ್ಯ ಸದಸ್ಯರುಗಳಿಗೆ ಈ ಮೂಲಕ ತಿಳಿಯಪಡಿಸಲಾಗಿದೆ.

**ವಿ. ಶ್ರೀಶ್**

ಕಾರ್ಯದರ್ಶಿ

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳಿಗೆ.**

# ಕರ್ನಾಟಕ ವಿಧಾನ ಪರಿಷತ್ತು

## ಲಘು ಪ್ರಕಟಣೆ ಭಾಗ – 2

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

ಸೋಮವಾರ, ದಿನಾಂಕ: 01 ಏಪ್ರಿಲ್, 2013

**ಸಂಖ್ಯೆ:** 16

ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 7ರ ಉಪ ಕಲಂ (1)ರಲ್ಲಿ ಉಲ್ಲೇಖಿಸಿರುವಂತೆ ಸರ್ಕಾರಿ ನೌಕರನಲ್ಲದ ಪ್ರತಿಯೊಬ್ಬ ಸಾರ್ವಜನಿಕ ನೌಕರನೂ ಸಹ ತನ್ನ ಮತ್ತು ತನ್ನ ಕುಟುಂಬದ ಸದಸ್ಯರ ಆಸ್ತಿ ಮತ್ತು ದಾಯಿತ್ವಗಳ ಪಟ್ಟಿಯನ್ನು ನಿಗದಿತ ನಮೂನೆಯಲ್ಲಿ ಪ್ರತಿ ವರ್ಷ ಜೂನ್ ತಿಂಗಳ 30 ರೊಳಗಾಗಿ ಲೋಕಾಯುಕ್ತರಿಗೆ ಸಲ್ಲಿಸತಕ್ಕದ್ದು. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ/18/ಸೇಲೋಯು/2008, ದಿನಾಂಕ:25.01.2010ರಲ್ಲಿ ತಿದ್ದುಪಡಿ ಮಾಡಿರುವಂತೆ, ಕರ್ನಾಟಕ ಶಾಸಕಾಂಗದ ಸದಸ್ಯರು 2012–13ನೇ ಸಾಲಿನ ತಮ್ಮ ಮತ್ತು ತಮ್ಮ ಕುಟುಂಬದ ಸದಸ್ಯರ ಆಸ್ತಿ ಮತ್ತು ದಾಯಿತ್ವಗಳ ಪಟ್ಟಿಯನ್ನು ನಿಗದಿತ ನಮೂನೆಯಲ್ಲಿ ಪ್ರತಿ ಪುಟಕ್ಕೂ ಹಾಗೂ ಲಗತ್ತುಗಳಿಗೂ ಸಹಿ ಮಾಡಿ, ಪುಟ ಸಂಖ್ಯೆಯೊಂದಿಗೆ, ನಿಗದಿತ ಅವಧಿಯೊಳಗೆ (ಅಂದರೆ 29ನೇ ಜೂನ್ 2013ರಂದು ಅಥವಾ ಅದಕ್ಕಿಂತ ಮುಂಚಿತವಾಗಿ) ಲೋಕಾಯುಕ್ತರಿಗೆ ಸಲ್ಲಿಸಬೇಕೆಂದು ಕರ್ನಾಟಕ ಲೋಕಾಯುಕ್ತ ನಿಬಂಧಕರು ತಮ್ಮ ಪತ್ರದಲ್ಲಿ ತಿಳಿಸಿರುತ್ತಾರೆ.

ಆದುದರಿಂದ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳು 2012–13ನೇ ಸಾಲಿನ ತಮ್ಮ ಮತ್ತು ತಮ್ಮ ಕುಟುಂಬದ ಸದಸ್ಯರ ಆಸ್ತಿ ಮತ್ತು ದಾಯಿತ್ವಗಳ ಪಟ್ಟಿಯನ್ನು ಈ ಲಘು ಪ್ರಕಟಣೆಯೊಂದಿಗೆ ಲಗತ್ತಿಸಲಾಗಿರುವ ನಮೂನೆಯಲ್ಲಿ ದಿನಾಂಕ: 30ನೇ ಜೂನ್ 2013ರೊಳಗಾಗಿ (ಅಂದರೆ 29ನೇ ಜೂನ್ 2013ರಂದು ಅಥವಾ ಅದಕ್ಕಿಂತ ಮುಂಚಿತವಾಗಿ) ಲೋಕಾಯುಕ್ತ, ಅವರಿಗೆ ನೇರವಾಗಿ ಸಲ್ಲಿಸಬೇಕೆಂದು ಈ ಮೂಲಕ ಮಾನ್ಯ ಸದಸ್ಯರುಗಳ ಗಮನಕ್ಕೆ ತರಲಾಗಿದೆ.

ವಿ. ಶ್ರೀಶ್,
ಕಾರ್ಯದರ್ಶಿ.

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳಿಗೆ**

# ಕರ್ನಾಟಕ ವಿಧಾನ ಪರಿಷತ್ತು

## ಲಘು ಪ್ರಕಟಣೆ ಭಾಗ-2

(ಸಂಸದೀಯ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

ಗುರುವಾರ, ದಿನಾಂಕ: 28ನೇ ಮಾರ್ಚ್, 2013

ಸಂಖ್ಯೆ: 17

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಕಾಯ್ದೆ ಪ್ರಕರಣ 33(1)ರ ರೀತ್ಯಾ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಗಣೇಶ್ ಕಾರ್ಣಿಕ್ ಅವರನ್ನು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಅಕಾಡೆಮಿಕ್ ಕೌನ್ಸಿಲ್‌ನ ಸದಸ್ಯತ್ವಕ್ಕೆ ಮಾನ್ಯ ಸಭಾಪತಿಯವರು ನಾಮನಿರ್ದೇಶನ ಮಾಡಿರುತ್ತಾರೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

**ವಿ. ಶ್ರೀಶ್**
ಕಾರ್ಯದರ್ಶಿ

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳಿಗೆ